# ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ

ಕೈಮಗ್ಗ ಕ್ಷೇತ್ರದಲ್ಲಿ ವ್ಯವಸಾಯದ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಕಲ್ಪಿಸುವ ಅವಕಾಶ ಹೊಂದಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ಸಮಯಕ್ಕೆ ಅನುಗೂಣವಾಗಿ ಉತ್ಪಾದನೆ, ಹೊಸ ವಿನ್ಯಾಸದ ಹಾಗೂ ಗುಣಮಟ್ಟದ ಬಟ್ಟೆಯನ್ನು ಉತ್ಪಾದಿಸಲು ಮತ್ತು ನೇಕಾರರ ಜೀವನಮಟ್ಟ ಸುಧಾರಿಸಲು ಭಾರತ ಸರಕಾರದ 10 ತಂತ್ರಜ್ಞಾನ ಸಂಸ್ಥೆಗಳಲ್ಲಿ 06 ಕೈಮಗ್ಗ ತಂತ್ರಜ್ಞಾನ ಸಂಸ್ಥೆಗಳನ್ನು ಕೇಂದ್ರ ಸರಕಾರದ ಅಡಿಯಲ್ಲಿ ಮತ್ತು 04 ತಂತ್ರಜ್ಞಾನ ಸಂಸ್ಥೆಗಳನ್ನು ರಾಜ್ಯ ಸರಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

**ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:**

1) ಕೈಮಗ್ಗ ಮತ್ತು ಜವಳಿ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುವುದು.
2) ಕೈಮಗ್ಗ ತಾಂತ್ರಿಕ ವಿದ್ಯೆಯನ್ನು ಜವಳಿ ಕ್ಷೇತ್ರದಲ್ಲಿ ಅಳವಡಿಸುವುದು.
3) ಕೈಮಗ್ಗದಲ್ಲಿ ನುರಿತ ಕುಶಲಕರ್ಮಿಗಳನ್ನು ಜವಳಿ ಕ್ಷೇತ್ರಕ್ಕೆ ನೀಡುವುದು.
4) ಕೈಮಗ್ಗದಲ್ಲಿ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಜವಳಿ ಕ್ಷೇತ್ರದಲ್ಲಿ ಅಳವಡಿಸುವುದು.

**ಕೇಂದ್ರ ಸರಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಮಗ್ಗ ತಂತ್ರಜ್ಞಾನ ಸಂಸ್ಥೆಗಳು :**

1) ವಾರಣಾಸಿ, ಉತ್ತರ ಪ್ರದೇಶ
2) ಸೇಲಂ, ತಮಿಳುನಾಡು
3) ಗುವಾಹಟಿ, ಆಸ್ಸಾಂ
4) ಜೋಧಪುರ, ರಾಜಸ್ಥಾನ
5) ಬರ್ಗಾರ, ಓರಿಸ್ಸಾ
6) ಫುಲಿಯಾ–ಸಂತಿಪುರ, ವೆಸ್ಟ ಬಂಗಾಲ

**ರಾಜ್ಯ ಸರಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಮಗ್ಗ ತಂತ್ರಜ್ಞಾನ ಸಂಸ್ಥೆಗಳು :**

1) ಗದಗ, ಕರ್ನಾಟಕ
2) ವೆಂಕಟಗೀರಿ, ಆಂದ್ರ ಪ್ರದೇಶ
3) ಚಂಪಾ, ಚತ್ತಿಡಗಡ
4) ಕನ್ನೂರ, ಕೇರಳ

**ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯು** 1994 ರಿಂದ ರಾಜ್ಯ ಸರಕಾರದ ಕೈಮಗ್ಗ ಮತ್ತು ಜವಳಿ ಇಲಾಖೆ ಅಡಿ ಕಾರ್ಯನಿರ್ವಹಿಸುತಿದೆ. ರಾಜ್ಯದಲ್ಲಿ ಕೈಮಗ್ಗ ಡಿಪ್ಲೋಮಾ ಕೋರ್ಸ ತರಬೇತಿಯನ್ನು ಈ ಸಂಸ್ಥೆಯಿಂದ ನೀಡಲಾಗುತ್ತಿದೆ.

ಕರ್ನಾಟಕವಲ್ಲದೆ ತಮಿಳುನಾಡು, ಕೇರಳ, ಆಂದ್ರ ಪ್ರದೇಶ, ಗೋವಾ ಮತ್ತು ಪುದಚೇರಿಯಿಂದ ವಿದ್ಯಾರ್ಥಿಗಳು ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯಲ್ಲಿ ಡಿಪ್ಲೋಮಾ ಕೋರ್ಸ ತರಬೇತಿ ಪಡೆಯುತ್ತಾರೆ.

**ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ಕಾರ್ಯನಿರ್ವಹಿಸುತ್ತಿರುವ ಸ್ಥಳ :**

ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯು ನರಸಾಪೂರ–ಗದಗದಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ಸಂಸ್ಥೆಯ ಸೌಲಭ್ಯಗಳು :**

1) ವಾಚನಾಲಯ
2) ಲ್ಯಾಬರೇಟರಿ
3) ಕಂಪ್ಯೂಟರೈಸಡ ಡಿಸೈನಿಂಗ್
4) ತರಗತಿ ಕೊಠಡಿಗಳು
5) ಗಂಡು ಮಕ್ಕಳ ವಸತಿ ನೀಲಯ
6) ಇಂಟರ್ನೆಟ್ ಮತ್ತು ವೈಫೈ
7) ಕ್ರೀಡೆ

**ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ಪ್ರವೇಶ/ನಿಬಂಧನೆಗಳು :**

1) ಸಂಸ್ಥೆಯಿಂದ 03 ವರ್ಷದ ಡಿಪ್ಲೋಮಾ ಇನ್ ಹ್ಯಾಂಡಲೂಮ್ ಮತ್ತು ಟೆಕ್ಸಟೈಲ ಟೆಕ್ನಾಲಜಿ ಕೋರ್ಸನ್ನು ನೀಡಲಾಗುತ್ತಿದೆ.
2) ಅಭ್ಯರ್ಥಿಗಳ ಕನಿಷ್ಠ 10 ನೇ ತರಗತಿ ಪಾಸ್ ಆಗಿರಬೇಕು
3) ಅಭ್ಯರ್ಥಿಗಳ ವಯಸ್ಸು 15 ರಿಂದ 23 ವರ್ಷ ಒಳಗೊಂಡವರಾಗಿರಬೇಕು.
4) ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳು 15 ರಿಂದ 25 ವರ್ಷ ಒಳಗೊಂಡವರಾಗಿರಬೇಕು.
5) ಸದರಿ ಕೋರ್ಸಗೆ 40 ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ.
6) ಅಭ್ಯರ್ಥಿಗಳಿಗೆ ಪ್ರತಿ ತಿಂಗಳು ರೂ, 1,100–00 ಶಿಷ್ಯವೇತನ ನೀಡಲಾಗುವುದು.

**ಈ ಕೆಳಗಿನಂತೆ ಬೇರೆ ಬೇರೆ ರಾಜ್ಯಗಳಿಂದ 40 ವಿದ್ಯಾರ್ಥಿಗಳನ್ನು ತರಬೇತಿಗಾಗಿ ಆರಿಸಲಾಗುವುದು.**

| | | | |
|---|---|---|---|
| 1) | ಕರ್ನಾಟಕ | – | 22 |
| 2) | ತಮಿಳುನಾಡು | – | 8 |
| 3) | ಆಂದ್ರ ಪ್ರದೇಶ | – | 4 |
| 4) | ಕೇರಳ | – | 3 |
| 5) | ಪುದಚೇರಿ | – | 2 |
| 6) | ಗೋವಾ | – | 1 |
| | **ಒಟ್ಟು** | | 40 |

# ಕರ್ನಾಟಕ ಕೈಮಗ್ಗ ನೇಕಾರರ ಮುಂದುವರೆದ ತರಬೇತಿ ಸಂಸ್ಥೆ, ಜಮಖಂಡಿ

ಕೈಮಗ್ಗ ಕ್ಷೇತ್ರದಲ್ಲಿ ವ್ಯವಸಾಯದ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಕಲ್ಪಿಸುವ ಅವಕಾಶ ಹೊಂದಿರುತ್ತದೆ. ಕೈಮಗ್ಗ ಕ್ಷೇತ್ರದಲ್ಲಿ ನೇಯುತ್ತಿರುವ ನೇಕಾರರಿಗೆ ಸಮಯಕ್ಕೆ ಅನುಗೂಣವಾಗಿ ಉತ್ಪಾದನೆ, ಹೊಸ ವಿನ್ಯಾಸದ ಹಾಗೂ ಗುಣಮಟ್ಟದ ಬಟ್ಟೆಯನ್ನು ಉತ್ಪಾದಿಸಲು ಮತ್ತು ನೇಕಾರರ ಜೀವನಮಟ್ಟ ಸುಧಾರಿಸಲ ರಾಜ್ಯ ಸರಕಾರದ ಅಡಿಯಲ್ಲಿ ಕರ್ನಾಟಕ ಕೈಮಗ್ಗ ನೇಕಾರರ ಮುಂದುವರೆದ ತರಬೇತಿ ಸಂಸ್ಥೆಯು ಕ್ರಿ.ಶ. 2002 ರಿಂದ ಜಮಖಂಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಕರ್ನಾಟಕ ಕೈಮಗ್ಗ ನೇಕಾರರ ಮುಂದುವರೆದ ತರಬೇತಿ ಸಂಸ್ಥೆಯ ಗುರಿ ಮತ್ತು ಉದ್ದೇಶಗಳು :**

1) ಕೈಮಗ್ಗ ಮತ್ತು ಜವಳಿ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುವುದು.
2) ಕೈಮಗ್ಗ ನೇಕಾರರಿಗೆ ಉನ್ನತ ಮಟ್ಟದ ತಾಂತ್ರಿಕ ತರಬೇತಿ ನೀಡುವುದು.
3) ಕೈಮಗ್ಗದಲ್ಲಿ ನುರಿತ ಕುಶಲಕರ್ಮಿಗಳನ್ನು ಜವಳಿ ಕ್ಷೇತ್ರಕ್ಕೆ ನೀಡುವುದು.
4) ಕೈಮಗ್ಗದಲ್ಲಿ ಹೊಸ ವಿನ್ಯಾಸದ ನೇಯ್ಗೇ ತರಬೇತಿ ಕಾರ್ಯಕ್ರಮಗಳನ್ನು ನೇಕಾರರಿಗೆ ನೀಡುವುದು.
5) ನೇಕಾರರ ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ನೇಕಾರರ ಜೀವನ ಮಟ್ಟವನ್ನು ಸುಧಾರಿಸುವುದು.

ಕಳೇದ 03 ವರ್ಷಗಳಲ್ಲಿ 95 ಕೈಮಗ್ಗ ನೇಕಾರರಿಗೆ ಸಂಸ್ಥೆಯ ವತಿಯಿಂದ ತರಬೇತಿ ನೀಡಲಾಗಿರುತ್ತದೆ ಅದರಲ್ಲಿ 21 ಪರಿಶಿಷ್ಠ ಜಾತಿ ನೇಕಾರರಿಗೆ ಹಾಗೂ 13 ಪರಿಶಿಷ್ಠ ಪಂಗಡದ ನೇಕಾರರಿಗೆ ತರಬೇತಿ ನೀಡಲಾಗಿದೆ. ಪ್ರಸ್ತುತ ತರಬೇತಿಯಲ್ಲಿ ನೇಕಾರರಿಗೆ ಜಕಾರ್ಡ ಬೇಡ್‌ಶೀಟ್, ಮಲ್ಟಿಟ್ರೇಡಲ್ ಬೇಡ್‌ಶಿಟ್, ಟಾವೆಲ್ಸ, ನ್ಯಾಪಕಿನ್ ಮತ್ತು ಇನ್ನೀತರ ವಿವಿಧ ನಮೂನೆಯ ಬಟ್ಟೆಗಳನ್ನು ನೇಯಲು ತರಬೇತಿ ನೀಡಲಾಗಿದೆ.